ತೆಗೆದುಕೊಂಡು ಸಸ್ಪೆಂಡ್ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದನ್ನು ಬಿಟ್ಟು ಇವ್ಹೋತ್ತು ಏಳು ಬಾಟಲನ್ನು ಇಟ್ಟು ಆದರೆ ತೆಗೆದು ಕೊಂಡಿದ್ದಾರೆ ಎಂದು ನೆಪಹೇಳಿ ಈ ರೀತಿ ಮಾಡಿದ್ದಕೆ ಅಲ್ಲವೆ? ಅವನು ಹೇಗೆ ಮುಟ್ಟುತ್ತಾನೆ? ಅವರನ್ನು ಇವ್ಹೋತ್ತು ಸ್ಥಳದಲ್ಲೇ ಸಸ್ಪೆಂಡ್ ಮಾಡಬೇಕು. ಅಂದರೆ ಕ್ರಮ ತೆಗೆದುಕೊಳ್ಳಬೇಕು. ಆ ಹೆಂಡದ ಕಂಟ್ರಾಕ್ಟರ್ ಗೂಂಡಾಗಳನ್ನು ಕರೆದುಕೊಂಡು ಹೋಗಿ ಹರಿಜನ-ಗಿರಿಜನರ ಮೇಲೆ ಹಲ್ಲೆ ಮಾಡಿಸಿದ್ದಾನೆ ಅವನ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡಿಸಬೇಕು. ಇದುನಮ್ಮ ಬೇಡಿಕೆ. ಆಗುತ್ತೋ ಇಲ್ಲವೋ ಎಂಬುದನ್ನು ತಾವು ಹೇಳಿ ಇಲ್ಲದೇ ಇದ್ದರೆ ನಮ್ಮ ದಾರಿ ನಮಗೆ ನಿಮ್ಮ ದಾರಿ ನಿಮಗೆ ನಿಮಗೆ ಜವಾಬ್ದಾರಿ ಇಲ್ಲ ಹರಿಜನಕ್ಕೆ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ.....

(ಗೊಂದಲ)

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಇವ್ಹೋತ್ತು ನನಗೆ ಬಂದರತಕ್ಕಂಥ ಮಾಹಿತಿ ಪ್ರಕಾರ ನಾನು ಇವ್ಹೋತ್ತು ಇಲ್ಲಿ ಹೇಳಿದ್ದೇನೆ. ನಾನೇ ಖುದ್ದು ಗ್ರಾಮಕ್ಕೆ ಹೋಗಿ ಪರಿಶೀಲನೆ ಮಾಡಿ ಅದು ಏನು ಕ್ರಮ ಜರುಗಿದೆ ವಿಮರ್ಶೆ ಮಾಡಿದ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ಸದನಕ್ಕೆ ಪ್ರಾಮಾಣಿಕವಾದ ನ್ಯಾಯವನ್ನು ಒದಗಿಸುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ.

(ಗೊಂದಲ)

5.00 ಪಿ.ಎಂ

MR. SPEAKER : You were a Minister. I want to know when the Hon. Minister says 'I will visit the spot and I will report to the house, 1 what else you want me to do?

(ಈ ಹಂತದಲ್ಲೇ ಬಿ.ಜೆ.ಪಿ. ಸದಸ್ಯರು ಸರ್ಕಾರದ ವಿರುದ್ಧಿಕಾರ ಎಂದು ಕೂಗುತ್ತಾ ಸಭಾತ್ಯಾಗ ಮಾಡಿದರು)

(2) ದ.ಕ. ಜಿಲ್ಲೆಯಲ್ಲಿ ಹೆಣ್ಣುಮಗಳ ಮನೆ ನೆಲಸಮ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ. ಅದೇ ರೀತಿ ಇದ್ದರೆ ಚೆನ್ನಾಗಿರುತ್ತದೆ. ಅವರುಗಳ ವರ್ತನೆ ಏನು ಎಂಬುದು ಗೊತ್ತಾಗುತ್ತದೆ.

ಸನ್ಮಾನ್ಯ ಸಭಾಪತಿಯವರು ಮತ್ತು ಜಯರಾಮಶೆಟ್ಟರು ಏನು ಹೇಳಿದ್ದಾರೆ ಅದರ ಬಗ್ಗೆ ಹೇಳುತ್ತೇನೆ. ಕಮಲಾ ಮೆಹಂತಿ ಎನ್ನುವವರು ಬಾಡಿಗೆ ಮನೆಯಲ್ಲಿ ವಾಸವಿದ್ದರು. ಅವರಿಗೆ ಸರ್ವೆ ನಂ 89 ರೊಳಗೆ ಪಾರ್ಟ್ ನಂ. 302:6ರಲ್ಲಿ ಒಂದು ಆಶ್ರಯ ಸೈಟ್ ಕೂಡ ಕೊಡಲ್ಪಟ್ಟಿತು. ಆದರೆ ಅವರು ಅಲ್ಲಿಗೆ ಹೋಗಲಿಲ್ಲ, ಈ ಸಾರ್ವಜನಿಕರ ಉಪಯೋದಕ್ಕಾಗಿ ಕಾಯ್ದಿರಿಸಿದ್ದ ಸರ್ವೇ ನಂ. 107.17ರಲ್ಲಿ ಖಾಯಂ ಆ ಮನೆ ಕಟ್ಟುವುದಕ್ಕೆ ಪ್ರಯತ್ನಪಟ್ಟರು, ಅವರಿಗೆ ನೋಟೀಸ್ ಕೊಟ್ಟರೆ ನೋಟೀಸ್ ತೆಗೆದುಕೊಳ್ಳಲಿಲ್ಲ, ಬಾಯಲ್ಲಿ ಹೇಳಿದರೂ ಕೂಡ ಮನೆ ಕಟ್ಟುವುದನ್ನು ನಿಲ್ಲಿಸಲಿಲ್ಲ, ಆದ್ದರಿಂದ ಅಧಿಕಾರಿಗಳು ಆ ಮನೆಯನ್ನು ಕಿತ್ತು ಹಾಕಿದ್ದಾರೆ. ಜೊತೆಗೆ ಆ ಜಮೀನನ್ನು ಈ ಕಾಲಿ ಸಹಕಾರ ಸಂಘದವರು ಕೇಳಿದ್ದರು. ಇದು ಆಗಿದ್ದು 02-08-95ರಲ್ಲಿ, ದಿನಾಂಕ 03-08-95ರಲ್ಲಿ ಸನ್ಮಾನ್ಯ. ಜಯರಾಮಶೆಟ್ಟರು ಅಲ್ಲಿಗೆ ಹೋದರು. ರೆವಿನ್ಯೂ ಆಫೀಸರ್ಸ್ ಎಲ್ಲಿ ಅವರ ಬರಬೇಕು ಎಂದು ಹೇಳಿದರು. ರೆವಿನ್ಯೂ ಆಫೀಸರ್ಸ್. ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ವಿಲೇಜ್ ಆಕೌಂಟೆಂಟ್ ಅವರೆಲ್ಲಾ ಬಂದಾಗ ಆಗ ಆಫೀಸ್‌ನಲ್ಲಿ

ರಾತ್ರಿ 10-30 ಗಂಟೆಯವರೆಗೂ ಅವರನ್ನು ಕೂಡಿ ಹಾಕಿದರು ಅಲ್ಲಿಯ ಜನ ಎಲ್ಲಾ ಸೇರಿಕೊಂಡು.

ಈ ಮಧ್ಯೆ ಆಕಸ್ಮಾತ್ ಅವರು ಹೇಳಿ ಕಳುಹಿಸಿದರು ಎಂದು ಹೇಳುತ್ತಾರೆ ನಮ್ಮ ಸಭಾಪತಿಗಳು ಕೂಡ ಅಲ್ಲಿಗೆ ಹೋದರು, ಇವರೂ ಕೂಡ ಆ ಅಧಿಕಾರಿಗಳ ಬಗ್ಗೆ ಅವ್ಯಾಚ್ಯ ಶಬ್ದಗಳನ್ನು ಉಪಯೋಗಿಸಿದ್ದಾರೆ ಎಂದು ಜಿಲ್ಲಾಧಿಕಾರಿಗಳು ನನಗೆ ಕಳುಹಿಸಿರುವ ರಿಪೋರ್ಟ್‌ನಲ್ಲಿ ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳ ರಿಪೋರ್ಟ್ ಇಲ್ಲಿದೆ. ಇದರ ಜೊತೆಗೆ ಅಮೇಲೆ ತಹಸೀಲ್ದಾರರಿಗೆ ಸುದ್ದಿ ಹೋಯಿತು. ಅವರು ನಾಡ ಕಛೇರಿಯ ತಹಸೀಲ್ದಾರರನ್ನು ಅಲ್ಲಿಗೆ ಕಳುಹಿಸಿದರು. ಅವರನ್ನು ರಾತ್ರಿ 10-30 ಗಂಟೆಯವರೆಗೆ ಅಲ್ಲೇ ಕೂಡಿ ಹಾಕಿದರು. 10-30 ಗಂಟೆ ಆದಮೇಲೆ ಈ ಅಧಿಕಾರಿಗಳಿಂದ ನಮ್ಮ ಶಾಸಕರು. ನಮಗೇನೂ ತೊಂದರೆ ಕೊಡಲಿಲ್ಲ, ನಮಗೇನೂ ಬೈಯಲಿಲ್ಲ, ಎಂದು ಹೇಳಿ ಅವರ ಹತ್ತಿರ ಬರೆಯಿಸಿಕೊಂಡು ರಾತ್ರಿ 10-30 ಗಂಟೆಗೆ ಅವರನ್ನು ಬಿಟ್ಟಿದ್ದಾರೆ. ಇದು ವಾಸ್ತವವಾದ ಸಮಾಚಾರ ಆ ಮನೆಯಲ್ಲಿ ಕೂಡ ಈ ಬಗ್ಗೆ ಬಂದಾಗ ಅವರು ಹೇಳಿದರು ನೀವು ಮೇಲಧಿಕಾರಿಗಳಿಂದ ತನಿಖೆ ಮಾಡಿಸಿ ಎಂದು ಅವರು ಹೇಳಿದ್ದಾರೆ. ನಾನು ಒಂದು ಅಶ್ಯೂರನ್ಸ್ ಕೊಟ್ಟಿದ್ದೇನೆ, ಡಿವಿಷನಲ್ ಕಮಿಷನರ್‌ರವರಿಂದ ತನಿಖೆ ಮಾಡಿಸುತ್ತೇನೆ ಎಂದು. ಈ ಮನವಿಯಲ್ಲಿ ಕೂಡ ಡಿವಿಷನಲ್ ಕಮಿಷನರ್‌ರವರನ್ನು ಕಳುಹಿಸಿ ತನಿಖೆ ಮಾಡಿಸುತ್ತೇನೆ. ಒಂದು ಮಾತಿನಲ್ಲಿ ನಾನು ಹೇಳಬೇಕು ಎಂದು ಇಚ್ಛಿಪಡುತ್ತೇನೆ. ಈ ತರಹ ಏನಾದರೂ ಆಗಿದ್ದರೆ ಇದು ಅಕ್ಷಮ್ಯ ಅಪಾರಧ, ರಿಪೋರ್ಟ್ ಬರಲಿ ಆ ತರಹ ಏನಾದರೂ ಇದ್ದರೆ.....

ಶ್ರೀ ಯು.ಆರ್. ಸಭಾಪತಿ : ಇವರೆಲ್ಲಾ ಶಾಮೀಲಾಗಿದ್ದುಕೊಂಡು, ನಮ್ಮ ಮೇಲೆ ಕೇಸ್ ಹಾಕಲಿಕ್ಕೆ ಮಾಡಿದ್ದಾರೆ. ನಮ್ಮನ್ನೇ ಕೂಡಿಹಾಕಿ ಅವರನ್ನೇ ರಕ್ಷಣೆ ಮಾಡಲಿಕ್ಕೆ ಹೋಗುತ್ತಾರೆ. ಆ ರೀತಿ ವರದಿ ಕೊಟ್ಟರೆ ನಮ್ಮ ಹಕ್ಕು ಏನು ಎನ್ನುವುದನ್ನು ತಾವು ದಯವಿಟ್ಟು ಹೇಳಬೇಕು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ : ಈ ಸೈಟನ್ನು ರೆವಿನ್ಯೂ ಇನ್ಸ್‌ಪೆಕ್ಟರ್‌ಗೋಸ್ಕರ ಖಾಲಿ ಮಾಡಿಸಲಿಲ್ಲ, ಡೆಪ್ಯೂಟಿ ಕಮಿಷನರ್‌ಗೋಸ್ಕರ ಖಾಲಿ ಮಾಡಿಸಲಿಲ್ಲ, ಇವರೆಲ್ಲಾ ಒಂದಾಗುವ ಉದ್ದೇಶ ಏನಿದೆ. ಏಕೆ ಒಂದಾಗುತ್ತಾರೆ? ಯಾರಿಗೋಸ್ಕರ ಖಾಲಿ ಮಾಡಿಸಿದ್ದಾರೆ? ನಾನು ಈಗಾಗಲೇ ಹೇಳಿದ್ದೇನೆ. ಡಿವಿಶನಲ್ ಕಮಿಷನರ್ ಕೈಯಲ್ಲಿ ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದ್ದೇನೆ. you must be content about these things.

MR. SPEAKER : Theey are new Member. They are little bit enraged. let us try to soften their feelings. you are a senior person. Kindly entrust it to an officer who can do an impertially enquire into the whole thing. Let us not disbelieve the entire officialdom. I will appeal to the good sense of the Hon. Member.

SRI R.L. JALAPPA : Equally other people also. But, I am sending Divisional Commissioner, Sir.

ಅಧ್ಯಕ್ಷರು : ಸಭಾಪತಿಗಳೇ, ಒಬ್ಬ ಹಿರಿಯ ಅಧಿಕಾರಿಗಳನ್ನು ವಿಭಾಗಾಧಿಕಾರಿಗಳನ್ನು ಕಳುಹಿಸುತ್ತಾ ಇದ್ದಾರೆ. ಎಲ್ಲಾ ಅಧಿಕಾರಿಗಳನ್ನು ಒಮ್ಮೊಗೇ ನಾವು ಅಪನಂಬಿಕೆಯಿಂದ

ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲರೂ ಷಾಮೀಲಾಗಿದ್ದಾರೆಂದು ಒಟ್ಟಿಗೆ ಹೇಳುವುದು ಬೇಡ. ದಯಮಾಡಿ ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ವಿಭಾಗಾಧಿಕಾರಿಗಳು ಬಂದು ವಿಚಾರಣೆ ಮಾಡಿ ನಂತರ ಕೂಡ ನಿಮಗೆ ಸಮಾಧಾನ ಆಗಲಿಲ್ಲ ಎಂದರೆ ಮತ್ತೆ ನಾವು ಮಾತನಾಡೋಣ ಏನು ಮಾಡಬೇಕು ಎಂದು ಹೇಳಿ. ಅದನ್ನು ಇಲ್ಲಿಗೇ ಮುಗಿಸೋಣ.

(3) ಕುಂದಾಪುರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಕೊಲೆ.

ಶ್ರೀ ಪಿ.ಜೆ.ಆರ್. ಸಿಂಧ್ಯಾ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ ಪ್ರತಾಪ್ ಚಂದ್ರ ಶೆಟ್ಟಿಯವರು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲ್ಲಿಯವರು. ಖರ್ಗೆ ಸಾಹೇಬರು ಪ್ರಸ್ತಾಪ ಮಾಡಿದಂಥ ವಿಚಾರ ಏನಿದೆ ಈ ವಿಚಾರದ ಬಗ್ಗೆ ನಾನು ಹೇಳಿಕೆಯನ್ನು ದೀರ್ಘವಾಗಿ ಕೊಡಲಿಕ್ಕೆ ಕಷ್ಟವಾಗುತ್ತದೆ ಏಕೆಂದರೆ ಇದು ಸಬ್‌ಜುಡೀಸ್ ಆಗುತ್ತದೆ. ಮ್ಯಾಜೀಸ್ಟ್ರೇಟ್ ಕೋರ್ಟಿನಲ್ಲಿ ಈಗಾಗಲೇ ದಿನಾಂಕ 05-08-95ರಂದು ಛಾರ್ಜ್ ಶೀಟನ್ನು ಫೈಲ್ ಮಾಡಿದ್ದಾರೆ ಪೋಲೀಸ್‌ನವರು. ಪೋಲೀಸ್‌ನವರು ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಿದ್ದಾರೆ. ಇದರ ಬಗ್ಗೆ ನಾನು ಧೀರ್ಘವಾಗಿ ಸಮಯದ ಅಭಾವ ಇರುವುದರಿಂದ ವಿಚಾರ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಮಾನ್ಯ ಪ್ರತಾಪ್ ಚಂದ್ರ ಶೆಟ್ಟಿಯವರಿಗೆ ಅಥವಾ ಶ್ರೀ ವೀರಪ್ಪಮೊಯ್ಲಿಯವರಿಗೆ ಏನಾದರೂ ಸಂಶಯ ಇದ್ದರೆ ಸಂಶಯಕ್ಕೆ ಅಸ್ಪದ ಬೇಕಾಗಿಲ್ಲ. ಈ ಸರ್ಕಾರ ಅಪರಾಧಿಗಳಿಗೆ ಯಾರಿಗೂ ರಕ್ಷಣೆ ಕೊಡತಕ್ಕಂಥ ಕೆಲಸ ಮಾಡುವುದಿಲ್ಲ. ಒಂದು ಮಾತನ್ನು ಹೇಳಿದಿರಿ ಕೆಲವು ಗೌರವಾನ್ವಿತ ಸದಸ್ಯರುಗಳು. ಮಾನ್ಯ ವೀರಪ್ಪಮೊಯ್ಲಿಯವರು ಸರ್ಕಾರದ ಮೇಲೆ ಒತ್ತಡ ತಂದು ಯಾರನ್ನೋ ಏನೋ ಮಾಡಿಸಬೇಕು ಎಂದು ಹೇಳಿ. ಮಾನ್ಯ ಅಧ್ಯಕ್ಷರೇ ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಆಗಲೀ, ನನ್ನ ಜೊತೆಯಲ್ಲಾಗಲೀ, ಮಾನ್ಯ ಖರ್ಗೆಯವರಾಗಲೀ ಜೊತೆಯಲ್ಲಿ ಆಗಲಿ, ನನ್ನ ಜೊತೆಯಲ್ಲಾಗಲೀ, ಮಾನ್ಯ ಖರ್ಗೆಯವರಾಗಲೀ, ಮಾನ್ಯ ಮೊಯಿಲಿಯವರಾಗಲೀ ನಿನ್ನೆ ದಿನ ತಮ್ಮ ಕೊಠಡಿಯಲ್ಲಿ ಪ್ರಸ್ತಾಪ ಮಾಡುವುದರ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಈ ವಿಚಾರ ಮಾಡುವುದರ ಬಗ್ಗೆ ಯಾವ ಸಂದರ್ಭದಲ್ಲೂ ಕೂಡ ಅವರು ಪ್ರಸ್ತಾಪ ಮಾಡಿಲ್ಲ. ಗೌರವಾನ್ವಿತ ಸದಸ್ಯರಾಗಿರತಕ್ಕಂಥ ಶ್ರೀ ಪ್ರತಾಪ್‌ಚಂದ್ರಶೆಟ್ಟಿಯವರು ಈ ಬಗ್ಗೆ ಒಂದು ಪತ್ರವನ್ನು ಬರೆದರು. ಸಿ.ಓ.ಡಿ. ಎನ್‌ಕ್ವೈರಿ ಆಗಬೇಕು ಎಂಬುದನ್ನು ಹೇಳಿದ್ದಾರೆ. ಸಿ.ಓ.ಡಿ. ಎನ್‌ಕ್ವೈರಿ ಆಗಬೇಕು ಎನ್ನುವುದನ್ನು ಸಹಿತ ಬರೆದಿದ್ದಾರೆ. ಅವರ ಪತ್ರದ ಆಧಾರದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಆಕ್ಟ್ ಮಾಡಿಲ್ಲ. ನಾವು ನಮ್ಮ ಪೋಲೀಸ್ ಇಲಾಖೆಯ ವರಿಷ್ಠರಿಂದ ವಿಚಾರಣೆ ಮಾಡಿ ಈ ವಿಚಾರಣೆ ಮಹತ್ವವನ್ನು ಅರಿತು ಅದರ ಆಧಾರದ ಮೇಲೆ ಸಿ.ಓ.ಡಿ.ಗೆ ಕೊಟ್ಟಿದ್ದೇವೆ. ನಮ್ಮ ಸಿ.ಓ.ಡಿ.ನಲ್ಲಿ ಒಳ್ಳೆಯ ದಕ್ಷತೆಯ ಅಧಿಕಾರಿಗಳು ಇದ್ದಾರೆ. ಯಾವುದೇ ಕಾರಣದಿಂದಲೂ ಡೈರಕ್ಟಾಗಿ ಅಥವಾ ಇನ್‌ಡೈರಾಕ್ಟಾಗಿ ಇದರಲ್ಲಿ, ಯಾರು ಅಕ್ಯೂಸ್ಡ್ ಇದ್ದಾರೆ ಅವರನ್ನು ಬಿಡುಗಡೆ ಮಾಡತಕ್ಕಂಥ ರಕ್ಷಣೆ ಮಾಡತಕ್ಕಂಥ ಪ್ರಶ್ನೆ ಬರುವುದಿಲ್ಲ ಎನ್ನತಕ್ಕಂಥ ಭಾವನೆಯನ್ನು ಈ ಸದನಕ್ಕೆ ತಮ್ಮ ಮುಖಾಂತರ ಕೊಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಇದು ಕೋರ್ಟ್‌ನಲ್ಲಿದೆ. ಇಲ್ಲಿ ಚರ್ಚೆ ಮಾಡಿದರೆ ಸಬ್‌ಜ್ಯುಡಿಸ್ ಆಗುತ್ತದೆಂದು ಹೇಳಿದರು. Expunged as orderd by the chain ಕೂಡ ಅವರು ನಿರಾಪರಾಧಿ ಎಂದು ಹೇಳಿದ್ದಾರೆ.

(ಗೊಂದಲ)